# ನನ್ನ ಚಿಕ್ಕಪ್ಪ

ನನಗಿರುವನು ಒಬ್ಬ ಚಿಕ್ಕಪ್ಪ
ಅವನ ಹೆಸರು ಸಿದ್ದಪ್ಪ
ನಾನು ಹೋದರೆ ಶಾಲೆಗೆ
ಅವನೋಡುವನು ಕಾಲೇಜಿಗೆ

ಖಾಲಿ ಕುಳಿತಾಗ ಕುಲುಕುಲು ನಗು
ಕೇಳಿದ್ದಕ್ಕೆಲ್ಲ ಕೊಡುವನು ಉತ್ತರ
ಟಿ.ವಿ ನೋಡುವಾಗ ಪ್ರಶ್ನಿಸಿದರೆ
ಅವನ ಸಿಟ್ಟಿಗೆ ನಾನು ತತ್ತರ

ಮೊಬೈಲನು ಮುಟ್ಟಿದರೆ ಸಾಕು
ಥಕ್ಕನೆ ಕೈಗೆ ಕಟೆಯುವನು
ತಾನು ಮಾತ್ರ ಸದಾ ಫೇಸ್‌ಬುಕ್ಕು
ವಾಟ್ಸಾಪ್ಪುಗಳಲ್ಲಿ ಮುಳುಗುವನು

ಅವನು ಪುಸ್ತಕ ಓದಿ
ನಮಗೂ ಹೇಳಿದರೆ ಸಂತೋಷ
ಬೇಗನೆ ಒಂದು ನೌಕರಿ ಸಿಕ್ಕು
ತಣಿಯಲಿ ಅವನ ಆಕ್ರೋಶ

ಹೀಗೆ ಇರುವನು ನಮ್ಮ ಚಿಕ್ಕಪ್ಪ
ಆತನ ಹೆಸರು ಇರುವುದು ಸಿದ್ದಪ್ಪ

● **ಸಾಗರ ಶಿ. ದಳವಾಯಿ**

ಎಳೆಯರ ಆಮೋದ

